# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ವಿಷಯ: ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯ ಅವಶ್ಯಕತೆಗನುಗುಣವಾಗಿ ನಿಧಿ ವ್ಯವಸ್ಥಾಪಕರನ್ನು ನೇಮಕ ಮಾಡುವ ಬಗ್ಗೆ.

ಓದಲಾಗಿದೆ:

1. ನಿಗಮದ ಆದೇಶ ಸಂಖ್ಯೆ ಕವಿಪ್ರನಿನಿ/ಬಿ.16/ಬಿ. 14/4977/2005-06/ ದಿನಾಂಕ 05-07-2007
2. ನಿಗಮದ ಆದೇಶ ಸಂಖ್ಯೆ ಕವಿಪ್ರನಿನಿ/ಬಿ.16/4977/2005-06/ ದಿನಾಂಕ 21-08-2007

ಪ್ರಸ್ತಾವನೆ:

1. ಕೇಂದ್ರ ಸರ್ಕಾರವು ದಿನಾಂಕ 01-01-2004 ರಂದು ಅಥವಾ ತರುವಾಯ ಕೇಂದ್ರ ಸರ್ಕಾರದ ಸೇವೆಗೆ ಸೇರುವ ಎಲ್ಲಾ ನೌಕರರಿಗೆ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಿದೆ
2. ಕರ್ನಾಟಕ ಸರ್ಕಾರದ ಸೇವೆಗೆ ದಿನಾಂಕ 01-04-2006 ರಂದು ಅಥವಾ ತರುವಾಯ ಸೇರುವ ಎಲ್ಲಾ ನೌಕರರಿಗೆ ಸರ್ಕಾರಿ ಆದೇಶ ಸಂಖ್ಯೆ ಎಫ್ ಡಿ (ವಿಶೇಷ) 04 ಪಿಇಟಿ 2005 ದಿನಾಂಕ 31-03-2006 ರಲ್ಲಿ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಿದೆ.
3. ಕವಿಪ್ರನಿನಿಯೂ ಸಹ ಕರ್ನಾಟಕ ಸರ್ಕಾರದ ದಿನಾಂಕ 31-03-2006 ರ ಆದೇಶವನ್ನು ನಿಗಮದ ಆದೇಶ ಸಂಖ್ಯೆ ಕವಿಪ್ರನಿನಿ/ಬಿ.16/ಬಿ. 14/4977/2005-06/ ದಿನಾಂಕ 05-07-2007 ಮತ್ತು ದಿನಾಂಕ 21-08-2007 ರ ಮೂಲಕ ಕವಿಪ್ರನಿನಿ / ವಿದ್ಯುತ್ ಸರಬರಾಜು ಕಂಪನಿಗಳ ಸೇವೆಗೆ ದಿನಾಂಕ 01-04-2006 ರಂದು ಅಥವಾ ತರುವಾಯ ಸೇರುವ ಎಲ್ಲಾ ನೌಕರರಿಗೆ ನೂತನ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಿದೆ.
4. ನೂತನ ಪಿಂಚಣಿ ಯೋಜನೆಯ ಅವಶ್ಯಕತೆಗನುಸಾರವಾಗಿ ಕೇಂದ್ರೀಯ ದಾಖಲೆ ನಿರ್ವಹಣಾ ಏಜೆನ್ಸಿ, ನಿಧಿ ವ್ಯವಸ್ಥಾಪಕರನ್ನೊಳಗೊಂಡಂತೆ ಪಾಯಿಂಟ್ ಆಫ್ ಪ್ರೆಸೆನ್ಸ್ ಮತ್ತು ಇತರ ಏಜೆನ್ಸಿಗಳನ್ನು ಕವಿಪ್ರನಿನಿಯು ನೇಮಕ ಮಾಡಬೇಕಿರುತ್ತದೆ. ಸದರಿ ಏಜೆನ್ಸಿಗಳನ್ನು ನೇಮಕ ಮಾಡಲು ಅನುಮತಿ ಕೋರಿ ಕವಿಪ್ರನಿನಿಯಿಂದ ಪತ್ರದ ಸಂಖ್ಯೆ 2512-19 ದಿನಾಂಕ 08-02-2013 ರಲ್ಲಿ ಕರ್ನಾಟಕ ಸರ್ಕಾರಕ್ಕೆ ಪತ್ರ ಬರೆಯಲಾಗಿತ್ತು.
5. ಕರ್ನಾಟಕ ಸರ್ಕಾರದ ಇಂಧನ ಇಲಾಖೆಯ ಪತ್ರದ ಸಂಖ್ಯೆ ಇಎನ್ 27 ಇಇಬಿ 2013 ದಿನಾಂಕ 10-02-2014 ರಲ್ಲಿ ಕಂಡಿಕೆ 4ರ ವಿಷಯಕ್ಕೆ ಸಂಬಂಧಿಸಿದಂತೆ ಕವಿಪ್ರನಿನಿಯು ಸಾರ್ವಜನಿಕ ವಲಯದ ಸಂಸ್ಥೆಯಾಗಿದ್ದು ಆದರ ನೌಕರರ ಸಂಬಳ ಮತ್ತು ಪಿಂಚಣಿಗಳ ಪಾವತಿಗಾಗಿ ಸರ್ಕಾರವನ್ನು ಅವಲಂಬಿಸದೆ ಸ್ವಂತ ಸಂಪನ್ಮೂಲಗಳಿಂದ ಪಾವತಿಸುತ್ತಿರುವುದರಿಂದ

ನೂತನ ಪಿಂಚಣಿ ಯೋಜನೆಯ ನಿರ್ವಹಣೆಗಾಗಿ ಏಜೆನ್ಸಿಗಳನ್ನು ನೇಮಕ ಮಾಡಲು ಸೂಕ್ತ ನಿರ್ಧಾರ ತೆಗೆದುಕೊಳ್ಳಲು ಕವಿಪ್ರನಿನಿಗೆ ಅಧಿಕಾರ ನೀಡಲಾಗಿರುತ್ತದೆ .

6. ಸದರಿ ಏಜೆನ್ಸಿಗಳ ನೇಮಕಾತಿ ವಿಷಯದಲ್ಲಿ ಕವಿಪ್ರನಿನಿಯೇ ಸೂಕ್ತ ನಿರ್ಧಾರ ತೆಗೆದುಕೊಳ್ಳುವಂತೆ ಇಂಧನ ಇಲಾಖೆಯು ತಿಳಿಸಿರುವ ಹಿನ್ನಲೆಯಲ್ಲಿ ಏಜೆನ್ಸಿಗಳ ನೇಮಕಾತಿ ಬಗ್ಗೆ ಪ್ರಸ್ತಾವನೆಗಳನ್ನು ಪರಿಶೀಲಿಸಿ ಶಿಫಾರಸ್ಸುಗಳನ್ನು ನಿಗಮಕ್ಕೆ ನೀಡಲು ಅನುಕೂಲವಾಗುವಂತೆ ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ), ಕವಿಪ್ರನಿನಿ ರವರ ಅಧ್ಯಕ್ಷತೆಯಲ್ಲಿ ಕವಿಪ್ರನಿನಿ ಅಧಿಕಾರಿಗಳು ಮತ್ತು ಅಧಿಕಾರಿ / ನೌಕರ ಸಂಘ-ಸಂಸ್ಥೆಗಳ ಪದಾಧಿಕಾರಿಗಳನ್ನು ಒಳಗೊಂಡ 9 ಸದಸ್ಯರ ಸಮಿತಿಯನ್ನು ಅಧಿಕೃತ ಜ್ಞಾಪನದ ಸಂಖ್ಯೆ ಕವಿಪ್ರನಿನಿ/ ಬಿ. 93/35982/2014-15 ದಿನಾಂಕ 04-12-2014 ರಲ್ಲಿ ರಚಿಸಲಾಗಿತ್ತು.

7. ದಿನಾಂಕ 10-02-2014 ರ ಕರ್ನಾಟಕ ಸರ್ಕಾರದ ಪತ್ರದಲ್ಲಿ *KPTCL is given the liberty (i) to either join NPS or (ii) opt for a suitable investment avenue for pension funds in line with DPE guidelines if any* ಎಂದು ನಮೂದಿಸಿರುವುದರಿಂದ ಎನ್ ಪಿ ಎಸ್ ಯೋಜನೆಯನ್ನು PFRDA ಮೂಲಕ ಅನುಷ್ಠಾನಕ್ಕೆ ತರುವ ಪ್ರಸ್ತಾವನೆ ಅಥವಾ DPE guidelines ವ್ಯಾಪ್ತಿಗೆ ಬರುವ ಸರ್ಕಾರಿ ಸ್ವಾಮ್ಯದ LIC of India ಸಂಸ್ಥೆಯ ಪಿಂಚಣಿ ಮತ್ತು ಸಮೂಹ ಯೋಜನೆ (Pension & Group Schemes) ವಿಭಾಗದಲ್ಲಿ ಎನ್ ಪಿ ಎಸ್ ನಿಧಿಯನ್ನು ತೊಡಗಿಸುವಂತೆ ಪ್ರಸ್ತಾಪಿಸುತ್ತಿರುವುದನ್ನೂ ಸಹ ಸಮಿತಿಯ ಪರಿಗಣಿಸಿತು.

8. ಮೇಲಿನ ಹಿನ್ನಲೆಯಲ್ಲಿ ಸಮಿತಿಯು ಅನೇಕ ಸಭೆಗಳನ್ನು ನಡೆಸಿ (i) PFRDA ನಿಯಮದ ವ್ಯಾಪ್ತಿಗೆ ಒಳಪಡುವ SBI Pension Funds Pvt. Ltd, LIC Pension Fund Ltd. ಮತ್ತು UTI Retirement solutions Ltd ರವರಿಂದ ಪ್ರಾತ್ಯಕ್ಷಿಕೆಯನ್ನು ಮತ್ತು (ii) DPE ನಿಯಮದ ವ್ಯಾಪ್ತಿಗೆ ಒಳಪಡುವ LIC (P&GS) Unit ಸೇರಿದಂತೆ ಇತರ ವಿಮಾ ಕಂಪನಿಗಳಿಂದ ಪ್ರಾತ್ಯಕ್ಷಿಕೆಯನ್ನು / ವಿವರಗಳನ್ನು ಪರಿಶೀಲಿಸಿತು.

9. ವಿವಿಧ ಏಜೆನ್ಸಿಗಳ ಮಾಹಿತಿಯನ್ನು ಸಮಿತಿಯು ಕೂಲಂಕುಷವಾಗಿ ಪರಿಶೀಲಿಸಿ ಅವುಗಳ ಸಾಧಕ – ಬಾಧಕಗಳನ್ನು ತಿಳಿಯಲು ಸಮಿತಿಯು KPCL ಸಂಸ್ಥೆಗೂ , HAL ಸಂಸ್ಥೆಗೂ ಮತ್ತು Assam State Grid Corporation Ltd. ಸಂಸ್ಥೆಗೂ ಭೇಟಿ ನೀಡಿ ಅಧ್ಯಯನ ನಡೆಸಿರುತ್ತದೆ.

10. ವಿವರವಾದ ಅಧ್ಯಯನದ ನಂತರ ಸಮಿತಿಯು PFRDA ಮಾರ್ಗಸೂಚಿಯ ಅನುಸಾರ ನೂತನ ಪಿಂಚಣಿ ಯೋಜನೆಯ ಅನುಷ್ಠಾನದಲ್ಲಿ ಮತ್ತು DPE ಮಾರ್ಗಸೂಚಿಯ ಅನುಸಾರ ನೂತನ ಪಿಂಚಣಿ ಯೋಜನೆಯ ಅನುಷ್ಠಾನದಲ್ಲಿ ಅನೇಕ ಸಾಧಕ-ಬಾಧಕಗಳನ್ನು ಗಮನಿಸಿ PFRDA ನಿಯಮದ ವ್ಯಾಪ್ತಿಯ ಏಜೆನ್ಸಿಗಳಲ್ಲಿ ನೂತನ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಲು ಹಲವಾರು ಅನಾನುಕೂಲಗಳು ಇರುವುದರಿಂದ DPE ನಿಯಮದ ವ್ಯಾಪ್ತಿಗೆ ಒಳಪಡುವ ಸರ್ಕಾರಿ ಸ್ವಾಮ್ಯದ

L.C (P&GS) Unit, Bengaluru ಸಂಸ್ಥೆಗೆ, ಕವಿಪ್ರನಿನಿಯು ಜಾರಿಗೊಳಿಸಿರುವ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯ ನಿರ್ವಹಣೆಯನ್ನು ವಹಿಸಬಹುದಾಗಿದೆ ಎಂದು ಅಭಿಪ್ರಾಯ ಪಟ್ಟಿರುತ್ತದೆ.

**ಈ ಮೇಲಿನ ಹಿನ್ನಲೆಯಲ್ಲಿ ನಿಗಮವು ಈ ಕೆಳಕಂಡ ಆದೇಶವನ್ನು ಹೊರಡಿಸಿದೆ.**

**ಆದೇಶ ಸಂಖ್ಯೆ : ಕವಿಪ್ರನಿನಿ/ ಬಿ.93/ 35978/2014-15 ದಿನಾಂಕ 04-05-2015**

1. ಕವಿಪ್ರನಿನಿ ಮತ್ತು ಎಸ್ಕಾಂಗಳ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯ ನಿರ್ವಹಣೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ LIC (P&GS) Unit, Bengaluru ಸಂಸ್ಥೆಗೆ ವಹಿಸಲಾಗಿದೆ. ಸದರಿ ಪ್ರಕ್ರಿಯೆಗೆ ಅವಶ್ಯಕ ದಸ್ತಾವೇಜುಗಳನ್ನು ಕವಿಪ್ರನಿನಿಯು ಪೂರ್ಣಗೊಳಿಸಲು ಅನುಮೋದನೆ ನೀಡಲಾಗಿದೆ.
2. ಆರಂಭಿಕವಾಗಿ ದಿನಾಂಕ 1-4-2015 ರ ಅವಧಿಯ ಪಿಂಚಣಿ ವಂತಿಗೆಯಿಂದ ಪ್ರಾರಂಭಿಸಿ ಅಲ್ಲಿಂದ ಮುಂದಕ್ಕೆ ಕಂಪನಿಗಳು ಪಾವತಿಸುವ ನೂತನ ಪಿಂಚಣಿ ಯೋಜನೆ ವಂತಿಗೆ (ನೌಕರರ ಕೊಡುಗೆ ಮತ್ತು ಕಂಪನಿಗಳ ಕೊಡುಗೆ ಸೇರಿದಂತೆ) ಯನ್ನು ನೌಕರರ ವಿವರಗಳ ಸಹಿತ ನಿಧಿ ನಿರ್ವಹಣೆ ಮತ್ತು ನೌಕರವಾರು ವಿವರಗಳ ನಿರ್ವಹಣೆಗಾಗಿ LIC (P&GS) Unit, Bengaluru ಸಂಸ್ಥೆಗೆ ಕೇಎನ್‌ಡಿಸಿಪಿಎಸ್ ಘಟಕದ ಮೂಲಕ ನೀಡುವುದು.
3. ನೂತನ ಪಿಂಚಣಿ ಯೋಜನೆ ದಿನಾಂಕ 1-4-2006 ರಿಂದ ಪ್ರಾರಂಭಿಸಿ ದಿನಾಂಕ 31-3-2015 ರ ವರೆಗಿನ ಅಧಿಕಾರಿ/ನೌಕರವಾರು ವಿವರಗಳನ್ನು ಕೇಎನ್‌ಡಿಸಿಪಿಎಸ್ ಘಟಕವು ಆದ್ಯತೆಯ ಮೇಲೆ ಪೂರ್ಣಗೊಳಿಸಿ ವಿವರಗಳೊಂದಿಗೆ ನಿಧಿಯನ್ನು LIC (P&GS) Unit, Bengaluru ಸಂಸ್ಥೆಗೆ ವರ್ಗಾಯಿಸುವುದು.
4. ನೂತನ ಪಿಂಚಣಿ ಯೋಜನೆಯಡಿ ಸಂಗ್ರಹಿಸಲಾದ ಪಿಂಚಣಿ ವಂತಿಗೆ ಮತ್ತು ಅದರ ಹೂಡಿಕೆಗಳ ಮೇಲೆ ಇದುವರೆಗೂ ಗಳಿಸಲಾದ ಬಡ್ಡಿಯನ್ನು ಹೂಡಿಕೆಗಳ ಹೊರತಾಗಿ ಯಾವುದೇ ಕಾರಣಕ್ಕೂ ಬ್ಯಾಂಕ್‌ನಿಂದ ಹಿಂಪಡೆದಿರುವುದಿಲ್ಲ. ಈಗ LIC (P&GS) Unit, Bengaluru ಸಂಸ್ಥೆಗೆ ಬ್ಯಾಂಕ್ ಖಾತೆಯಿಂದ ನಿಧಿ ವರ್ಗಾವಣೆ ಮುಂದುವರೆಸಲು. ಕೇಎನ್‌ಡಿಸಿಪಿಎಸ್ ಘಟಕಕ್ಕೆ ಅಧಿಕಾರ ನೀಡಲಾಗಿದೆ.

ಆದೇಶದ ಮೇರೆಗೆ.

ನಿರ್ದೇಶಕರು
(ಆಡಳಿತ ಮತ್ತು ಮಾನವ ಸಂಪನ್ಮೂಲ)
ಕವಿಪ್ರನಿನಿ

ಪ್ರತಿಗಳು.

1. ಎಲ್ಲಾ ವ್ಯವಸ್ಥಾಪಕ ನಿರ್ದೇಶಕರು, ಎಸ್ಕಾಂ/ ಪಿಸಿಕೆಲ್,
2. ಎಲ್ಲಾ ನಿರ್ದೇಶಕರು (ತಾಂತ್ರಿಕ), ಎಸ್ಕಾಂ/ ಪಿಸಿಕೆಲ್,
3. ಎಲ್ಲಾ ಅರ್ಥಿಕ ಸಲಹೆಗಾರರು, ಕವಿಪ್ರನಿನಿ / ಎಸ್ಕಾಂ
4. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ / ಎಸ್ಕಾಂ

5. ವ್ಯವಸ್ಥಾಪಕ ನಿರ್ದೇಶಕರು, ನಿರ್ದೇಶಕರು (ಆರ್ಥಿಕ) /(ಪ್ರಸರಣ) / (ಆ ಮತ್ತು ಮಾ.ಸಂ) / ನಿರ್ದೇಶಕರು ಮತ್ತು ಕಂಪನಿ ಕಾರ್ಯದರ್ಶಿ) ಇವರುಗಳ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿಭವನ, ಬೆಂಗಳೂರು. ಸದರಿ ವಿಷಯವನ್ನು ಮಾನ್ಯ ವ್ಯ.ನಿ/ನಿ ರವರ ಅವಗಾಹನೆಗೆ ತರುವಂತೆ ಕೋರಲಾಗಿದೆ.

**ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ವೆಬ್ ಸೈಟ್ ನಲ್ಲಿ ಪ್ರಕಟಿಸಲಾಗಿದೆ.**

1. ಉಪಪ್ರಧಾನ ವ್ಯವಸ್ಥಾಪಕರು (ಸಿಬ್ಬಂದಿ)/ (ತಾಂತ್ರಿಕ), ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
2. ಎಲ್ಲಾ ನಿಯಂತ್ರಣಾಧಿಕಾರಿಗಳು / ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿ), ಕವಿಪ್ರನಿನಿ / ವಿಸಕಂ.
3. ಅಧೀಕ್ಷಕ ಇಂಜಿನಿಯರ್ (ವಿ), ತುಂಗಭದ್ರ ಮಂಡಳಿ, ತುಂಗಭದ್ರ ಡ್ಯಾಂ
4. ಎಲ್ಲಾ ಉಪ ಲೆಕ್ಕ ನಿಯತ್ರಣಾಧಿಕಾರಿಗಳು, ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಕವಿಪ್ರನಿನಿ / ವಿಸಕಂ
5. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), (ಕಂಪ್ಯೂಟರ್ ಸೆಂಟರ್, ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
6. ಎಲ್ಲಾ ಸ.ಕಾ.ನಿ.ಇಂ (ವಿ) / ಲೆಕ್ಕಾಧಿಕಾರಿಗಳು, ಕವಿಪ್ರನಿನಿ / ವಿಸಕಂ

.ಪ್ರತಿಗಳನ್ನು ಸೂಕ್ತ ಮಾಹಿತಿಗಾಗಿ.

1. ಶ್ರೀ. ನಾಗರಾಜ್, ಅಧ್ಯಕ್ಷರು, ಕವಿಪ್ರನಿನಿ ನೌಕರರ ಸಂಘ, ಬೆಂಗಳೂರು, ನಿರ್ದೇಶಕರು, ಕವಿಪ್ರನಿನಿ / ಬೆವಿಕಂ/ಮಂವಿಕಂ/ ಗುವಿಕಂ/ ಹಾಗೂ ಚಾವಿಸನಿನಿ.
2. ಶ್ರೀ ಜಯರಾಜ್, ಅಧ್ಯಕ್ಷರು, ಕೆ.ಇ.ಬಿ. ಇಂಜಿನಿಯರ್‌ಗಳ ಸಂಘ, ಬೆಂಗಳೂರು, ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ವಿಸಕಂ.
3. ಪ್ರಧಾನ ಕಾರ್ಯದರ್ಶಿಗಳು, ಕವಿಪ್ರನಿನಿ ನೌಕರರ ಸಂಘ, ಬೆಂಗಳೂರು,
4. ಪ್ರಧಾನ ಕಾರ್ಯದರ್ಶಿಗಳು, ಕೆ.ಇ.ಬಿ. ಇಂಜಿನಿಯರ್‌ಗಳ ಸಂಘ, ಬೆಂಗಳೂರು,
5. ಪ್ರಧಾನ ಕಾರ್ಯದರ್ಶಿಗಳು, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು,
6. ಪ್ರಧಾನ ಕಾರ್ಯದರ್ಶಿಗಳು, ಕೆಇಬಿ ಎಸ್.ಸಿ ಮತ್ತು ಎಸ್.ಟಿ ನೌಕರರ ಕ್ಷೇಮಾಭಿವೃದ್ಧಿ ಸಂಘ, ಬೆಂಗಳೂರು,
7. ಪ್ರಧಾನ ಕಾರ್ಯದರ್ಶಿಗಳು, ಕವಿಪ್ರನಿನಿ ಡಿಪ್ಲೋಮೋ ಇಂಜಿನಿಯರ್‌ಗಳ ಸಂಘ, ಬೆಂಗಳೂರು,